ಸಾರಾಂಶ ಹಾಗೂ ಕೊನೆಯಲ್ಲಿ ತಪ್ಪದೇ ಇರುತ್ತಿದ್ದ 'ಮುಂದೆ ಏನಾಯಿತೆಂಬುದನ್ನು ತೆರೆಯ ಮೇಲೆ ವೀಕ್ಷಿಸಿ' ಎಂಬ ಸಾಲು, ನಟ ನಟಿಯರ ಹೆಸರು, ಸಿನಿಮಾದ ದೃಶ್ಯವೊಂದನ್ನು ಒಳಗೊಂಡ ಸಿನಿಮಾಚೀಟಿಗಳನ್ನು ರಸ್ತೆಯಲ್ಲಿ ಎಸೆಯುತ್ತಾ ಹೋಗುತ್ತಿದ್ದರು. ನಾವು ಗಾಡಿಯ ಹಿಂದೆಯೇ ಓಡಿಹೋಗಿ ಅದನ್ನು ಎತ್ತಿಕೊಳ್ಳುತ್ತಿದ್ದೆವು. ಹಸಿರು, ಹಳದಿ, ಗುಲಾಬಿ ಬಣ್ಣಗಳ ಚೀಟಿಗಳು! ಅವುಗಳ ಸುವಾಸನೆ ಒಂದು ರೀತಿಯ ಆಹ್ಲಾದ ನೀಡುತ್ತಿತ್ತು. ಹಾಗೆಯೇ ಆ ಚೀಟಿಗಳನ್ನು ಒಟ್ಟುಮಾಡಿಟ್ಟುಕೊಳ್ಳುವುದು ನನ್ನ ಅಭ್ಯಾಸವಾಗಿತ್ತು. ನನ್ನ ಹತ್ತಿರ ಸುಮಾರು ನೂರುನೂರೈವತ್ತು ಸಿನಿಮಾ ಚೀಟಿಗಳಿದ್ದವು!

ಸಿನಿಮಾ ಟೆಂಟ್‌ನಲ್ಲಿ ಎಲ್ಲಕ್ಕಿಂತ ಮುಂದೆ ಪರದೆಗೆ ಸಮೀಪದಲ್ಲಿ ಗಾಂಧಿಸೀಟು(ನೆಲ), ಹಲಗೆಗಳನ್ನು ಗೂಟಗಳ ಮೇಲೆ ಜೋಡಿಸಿಟ್ಟ ಬೆಂಚುಗಳು, ಮಡಿಸಿಡಬಹುದಾದಂತಹ ಕಬ್ಬಿಣದ ಕುರ್ಚಿಗಳು ಹೀಗೆ ಮೂರು ರೀತಿಯ, ಬೇರೆ ಬೇರೆ ಬೆಲೆಯ (ನೆಲ 25 ಪೈಸೆ, ಬೆಂಚು 1 ರೂ., ಕುರ್ಚಿ2 ರೂ.) ಟಿಕೆಟ್‌ಗಳನ್ನು ಕೊಡುತ್ತಿದ್ದರು. ಗಂಡಸರಿಗೆ ಹಾಗೂ ಹೆಂಗಸರಿಗೆ ಬೇರೆ ಬೇರೆಯಾಗಿ ಕೂರುವಂತೆ ಆಸನಗಳ ವ್ಯವಸ್ಥೆ ಇತ್ತು. ಅಂದರೆ ಗಂಡಸರು ಹಾಗೂ ಹೆಂಗಸರು ಪ್ರತ್ಯೇಕವಾಗಿ ಕುಳಿತುಕೊಳ್ಳುವಂತೆ ಮಧ್ಯದಲ್ಲಿ ಅರ್ಧ ಆಳೆತ್ತರ ತಗಡುಗಳನ್ನು ಉದ್ದಕ್ಕೂ ಜೋಡಿಸಿಡುತ್ತಿದ್ದರು. ಟೆಂಟ್ ಆದ್ದರಿಂದ ಸಿನಿಮಾ ಪ್ರಾರಂಭಿಸಲು ಕತ್ತಲಾಗುವವರೆಗೂ ಕಾಯಬೇಕಿತ್ತು. ದಿನಕ್ಕೆ ಎರಡು ಶೋಗಳು ಮಾತ್ರ. ಸಿನಿಮಾ ಪ್ರಾರಂಭದ ಮೊದಲು ನ್ಯೂಸ್ ರೀಲ್, ಸರ್ಕಾರದ ಸಾಧನೆಗಳು, ಕೆಲವು ಜಾಹೀರಾತುಗಳು ಇರುತ್ತಿದ್ದವು. ಅವುಗಳಲ್ಲಿ ನಮಗೆ ಅಂತಹ ಆಸಕ್ತಿಯೇನೂ ಇರುತ್ತಿರಲಿಲ್ಲ. ಸಿನಿಮಾ ಶುರುವಾದೊಡನೆ ಎಲ್ಲರೂ 'ಗಪ್‌ಚುಪ್' ಆಗಿ ನೋಡುತ್ತಿದ್ದೆವು. ಮಧ್ಯೆ ಮಧ್ಯೆ ನಾವು ಪ್ರೊಜೆಕ್ಟರ್ ಕಡೆ ತಿರುಗಿ ನೋಡುತ್ತಿದ್ದೆವು. ಇವರು ಸಿನಿಮಾ ಹೇಗೆ ಪರದೆ ಮೇಲೆ ಬಿಡ್ತಾರೆ ಅಂತ ನಮಗೆ ಆಶ್ಚರ್ಯ! ರೀಲ್ ತಿರುಗುವ ಶಬ್ದದೊಂದಿಗೆ, ಕೋನಾಕಾರದಲ್ಲಿ ಬೆಳಕು ಪರದೆಯ ಮೇಲೆ ಬೀಳುವುದು ಮಾತ್ರ ಕಾಣುತ್ತಿತ್ತು. ಈ ಮಧ್ಯೆ ಕಡಲೇಕಾಯಿ ವ್ಯಾಪಾರಿಗಳು ಬರುತ್ತಿದ್ದರು. ನಾಯಿಗಳು ಒಳಗೆ ನುಸುಳುತ್ತಿದ್ದವು. ಆಗ ಮಾತ್ರ ನಾವು ಹೆದರುತ್ತಿದ್ದೆವು. ಕಾಲುಗಳನ್ನು ಮೇಲೆತ್ತಿ ಚಕ್ಕಳಮಕ್ಕಳ ಹಾಕಿ ಕೂರುತ್ತಿದ್ದೆವು! ಯಾರಾದರೂ ಅದನ್ನು ಓಡಿಸುತ್ತಿದ್ದರು. ಸಿನಿಮಾ ಮುಗಿದ ನಂತರ 'ಜನಗಣಮನ...' ರೆಕಾರ್ಡ್ ಹಾಕುತ್ತಿದ್ದರು. ಅದನ್ನು ಕೇಳಿ, ನಿಂತು ಗೌರವ ಕೊಡುವಷ್ಟು ತಾಳ್ಮೆ ಯಾರಿಗೂ ಇರುತ್ತಿರಲಿಲ್ಲ. ಎಲ್ಲರೂ ಮನೆಗೆ ಹೋಗಲು ಗೇಟಿನ ಕಡೆ ನುಗ್ಗುವುದೊಂದೇ! ಕೊನೆಗೆ ರಾಷ್ಟ್ರಗೀತೆ ಹಾಕುವುದನ್ನು ನಿಲ್ಲಿಸಿದರು.

ಆರ್.ಎನ್. ಜಯಗೋಪಾಲ್ ಅವರ ನಿರ್ದೇಶನದ 'ಮುತ್ತು ಒಂದು ಮುತ್ತು' ಸಿನಿಮಾದ ದೃಶ್ಯವೊಂದನ್ನು ನಮ್ಮೂರಿನ ಟೆಂಟ್‌ನಲ್ಲಿ ಚಿತ್ರೀಕರಣ ಮಾಡಲಾಗುತ್ತಿತ್ತು. ನಾನು, ನಮ್ಮ ದೊಡ್ಡಪ್ಪನ ಮಗಳು ಹಾಗೂ ಕೆಲವು ಸ್ನೇಹಿತೆಯರು ಅದನ್ನು ನೋಡಲು ಹೋಗಿದ್ದೆವು. ನಮ್ಮನ್ನೂ ಒಳಗೆ ಕರೆದು ಕೂರಿಸಿದರು. ಚಿತ್ರದ ನಾಯಕಿಯನ್ನು ಖಳನಾಯಕ ಚುಡಾಯಿಸಿದಾಗ ಆಕೆ ಆತನ ಕಪಾಳಕ್ಕೆ ಹೊಡೆಯುವ ದೃಶ್ಯ. ಎರಡುಮೂರು ಟೇಕ್‌ಗಳ ನಂತರ ದೃಶ್ಯ ಓ.ಕೆ. ಆಯಿತು. ನಾಯಕಿ ಖಳನಾಯಕನಿಗೆ ಹೊಡೆಯುವಾಗ ನಮಗೆ ನಗು ತಡೆಯಲಾಗದೆ ನಕ್ಕುಬಿಟ್ಟಿದ್ದೆವು. ಚಿತ್ರೀಕರಣದ ನಂತರ ಟೆಂಟ್‌ನಿಂದ ಹೊರಗೆ ಬಂದಾಗ ದೊಡ್ಡಪ್ಪನ ಮಗಳ ಸಹಪಾಠಿಯೊಬ್ಬ, 'ಓಹೋ, ಏನ್ರೀ... ಸಿನಿಮಾದಲ್ಲಿ ಕಾಣಿಸಿಕೊಳ್ಬೇಕು ಅಂತ ಬಂದಿದ್ದಾ?' ಎಂದು ರೇಗಿಸಿದ. 'ಅವರು ಕರೆದ್ರು ಅಂತ ಹೋಗಿದ್ದಷ್ಟೇ. ನಿಮಗೂ ಆಸೆ